| ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ. | |
|---|---|
| ಸಿ.ಸಿ.ನಂ.**72/2021** | |
| | ಚಾಸಾ-**1** |
| | ಪ್ರಾಸಾ-**1** |
| ಸಾಕ್ಷಿದಾರರ ಹೆಸರು | ಶ್ರೀಮಯಿ ನಲ್ಲಬೋತುಲ |
| ಗಂಡನ ಹೆಸರು | ಮಲ್ಲಿಕಾರ್ಜುನ |
| ವಯಸ್ಸು | **42** ವರ್ಷ |
| ಉದ್ಯೋಗ | ಅಸಿಸ್ಟಂಟ್ ಫ್ರೊಫೇಸರ್ |
| ವಾಸಸ್ಥಳ | ಜಮಖಂಡಿ |

ದಿನಾಂಕ **13-08-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ- ಸ.ಸ.ಅ ರವರಿಂದಃ-

1. ನಾನು ಕಳೆದ 6 ವರ್ಷಗಳಿಂದ ಮಹಿಳಾ ಪ್ರಥಮ ದರ್ಜೆ ಕಾಲೇಜು, ಜಮಖಂಡಿಯಲ್ಲಿ ಸಹಾಯಕ ಪ್ರಾಧ್ಯಾಪಕರು ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಜಮಖಂಡಿ ಪಟ್ಟಣದ ಪ್ರಭಾತ ನಗರದಲ್ಲಿರುವ ಒಂದು ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆ. ನಾನು ನಿತ್ಯ ಬೆಳಿಗ್ಗೆ 9 ಗಂಟೆಗೆ ಕಾಲೇಜಿಗೆ ಹೋಗಿ ಸಂಜೆ 5-30 ಗಂಟೆಗೆ ಮರಳಿ ಮನೆಗೆ ಬರುತ್ತಿದ್ದೆ. ದಿನಾಂಕ 21-06-2021 ರಂದು ಸಂಜೆ 5-30 ಗಂಟೆಗೆ ನಾನು ಕಾಲೇಜಿನಿಂದ ಮನೆಗೆ ನಡೆದುಕೊಂಡು ಹೋಗುತ್ತಿರುವಾಗ, ದೇಸಾಯಿ ಸರ್ಕಲನಿಂದ ಮೈಗೂರ ರಸ್ತೆಯ ಬದಿಗೆ ಇರುವ ಡಾಃ ಜತ್ತಿರವರ ಮನೆಯ ಮುಂದೆ ಒಬ್ಬ ವ್ಯಕ್ತಿ ಬೈಕ್ ಮೇಲೆ ನನ್ನ ಎದುರಿಗೆ ಬಂದು ನನ್ನ ಕೈಯಲ್ಲಿದ್ದ ಪರ್ಸ್ ಎತ್ತಿಕೊಂಡು ಅದೇ ಮೋಟಾರ್ ಬೈಕ್ ಮೇಲೆ ವೇಗವಾಗಿ ಹೋಗಿರುತ್ತಾನೆ. ಆ ಸಮಯದಲ್ಲಿ ಕರೋನಾ ಸಾಂಕ್ರಾಮಿಕ ರೋಗದ ಪ್ರಯುಕ್ತ ನಿಗದಿತ ಲಾಕಡೌನ್ ಇದ್ದುದ್ದರಿಂದ ಸ್ಥಳದಲ್ಲಿ ಯಾರೂ ಇರಲಿಲ್ಲ. ಆದ್ದರಿಂದ ನಾನು ನೇರವಾಗಿ ನಮ್ಮ ಮನೆಗೆ ಹೋಗಿ ನನ್ನ ಗಂಡನಿಗೆ ವಿಷಯ ತಿಳಿಸಿರುತ್ತೇನೆ. ನನ್ನ ಗ್ರೇ ಕಲರ್ ಪರ್ಸ್‌ನಲ್ಲಿ ಒಂದು ಡೆಬಿಟ್ ಕಾರ್ಡ, ಒಂದು ಆಧಾರಕಾರ್ಡ, ಒಂದು ವಿವೊ ಎಸ್-1 ಪ್ರೋ-1920 ಮೊಬೈಲ್ ಹಾಗೂ ರೂ.500/- ನಗದು ಹಣ ಇತ್ತು.

2. ಮರುದಿನ ನಾನು ಬ್ಯಾಂಕಿಗೆ ಹೋಗಿ ನನ್ನ ಡೆಬಿಟ್ ಕಾರ್ಡ ಬ್ಲಾಕ್ ಮಾಡಲು ಅರ್ಜಿ ಸಲ್ಲಿಸಿರುತ್ತೇನೆ. ಸದರಿ ನನ್ನ ಡೆಬಿಟ್ ಕಾರ್ಡ ಬ್ಲಾಕ್ ಮಾಡುವ ಪೂರ್ವದಲ್ಲಿಯೇ ನನ್ನ ಪರ್ಸಿನಲ್ಲಿದ್ದ ಫೋನಿನಿಂದ ಎರಡು ಬಾರಿ ರೂ.5,000/- ಒಟ್ಟು ರೂ.10,000/-ಹಣವನ್ನು ಫೋನ್ ಪೇ ಮೂಲಕ ಹಣ ವರ್ಗಾಯಿಸಿರುವುದು ಗೊತ್ತಾಗಿರುತ್ತದೆ. ಸದರಿ ನನ್ನ ಮೊಬೈಲನಲ್ಲಿರುವ ಎರಡು ಸಿಮ್‌ಗಳ ನಂಬರಗಳನ್ನು ಬಳಸಿ ನಮ್ಮ ಕಾಲೇಜನಲ್ಲಿದ್ದ ವಿದ್ಯಾರ್ಥಿನಿಯರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಅಶ್ಲೀಲ ಟೆಕಸ್ಟ ಮೆಸೇಜ್ ಮತ್ತು ವಿಡಿಯೋಗಳನ್ನು ಕಳಿಸಲಾಗಿರುತ್ತದೆ. ನಂತರ ನಾನು ಆ ಎರಡು ಸಿಮ್‌ಗಳನ್ನು ಬ್ಲಾಕ್

ಮಾಡಿಸಿರುತ್ತೇನೆ. ನಂತರ ವಿದ್ಯಾರ್ಥಿನಿಯರು ತಮಗೆ ಒಬ್ಬ ವ್ಯಕ್ತಿ ಅಶ್ಲೀಲ ಮೆಸೇಜಗಳನ್ನು ಕಳುಹಿಸುತ್ತಿರುವ ಬಗ್ಗೆ ನನ್ನ ಗಮನಕ್ಕೆ ತಂದಿರುತ್ತಾರೆ. ನಂತರ ದಿನಾಂಕ 26-06-2021 ರಂದು ನಾನು ಪೋಲಿಸರ ಮುಂದೆ ದೂರು ನೀಡಿರುತ್ತೇನೆ.

3. ಈಗ ಸಾಕ್ಷಿಯು ಪ್ರಥಮ ವರ್ತಮಾನ ಹೇಳಿಕೆಯನ್ನು ನೋಡಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-1 ಎಂದು ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿನಾಂಕ 27-06-2021 ರಂದು ಪೋಲಿಸರು ನಾನು ತೋರಿಸಿರುವ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿರುತ್ತಾರೆ. ಈಗ ಸಾಕ್ಷಿಗೆ ಕಡತದಲ್ಲಿರುವ ಎರಡು ಫೋಟೋಗಳನ್ನು ತೋರಿಸಲಾಗಿ, ಸದರಿ ಫೋಟೋಗಳನ್ನು ಸ್ಥಳ ಪಂಚನಾಮೆ ಮಾಡುವ ಸಮಯದಲ್ಲಿ ತೆಗೆದ ಫೋಟೋಗಳು ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ಫೋಟೋಗಳನ್ನು ಕ್ರಮವಾಗಿ ನಿಪಿ-2 ಮತ್ತು ನಿಪಿ-3 ಎಂದು ಗುರುತಿಸಲಾಯಿತು.

4. ದಿನಾಂಕ 30-06-2021 ರಂದು ಪೋಲಿಸರು ನನ್ನನ್ನು ಪೋಲಿಸ್ ಠಾಣೆಗೆ ಕರೆಯಿಸಿ ಆರೋಪಿಯನ್ನು ತೋರಿಸಿದ್ದು, ನಾನು ಆತನನ್ನು ಗುರುತಿಸಿ ಆತನೇ ನನ್ನ ಪರ್ಸನ್ನು ಬೈಕ್ ಮೇಲೆ ಬಂದು ಕಸಿದುಕೊಂಡು ಹೋಗಿದ್ದು ಎಂದು ಪೋಲಿಸರಿಗೆ ತಿಳಿಸಿರುತ್ತೇನೆ. ತನಿಖೆಯ ಸಮಯದಲ್ಲಿ ಆರೋಪಿತನ ಹೆಸರು ವಿಚಾರಿಸಲಾಗಿ ಆತನ ಹೆಸರು ಸಚಿನ್ ರವಿ ಸಿಂಗಾರೆಡ್ಡಿ ಎಂದು ಗೊತ್ತಾಗಿರುತ್ತದೆ. ಸದರಿ ಆರೋಪಿ ಈಗ ನ್ಯಾಯಾಲಯದ ಮುಂದೆ ಹಾಜರು ಇರುತ್ತಾನೆ.

5. ಈಗ ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಪರ್ಸ್, ಆಧಾರಕಾರ್ಡ ಮತ್ತು ಒಂದು ವಿವೊ ಮೊಬೈಲ್ ನೋಡಿ ಅವುಗಳನ್ನು ಆರೋಪಿಯು ತನ್ನ ಕೈಯಿಂದ ಕಸಿದುಕೊಂಡು ಹೋಗಿರುವಂತಹ ವಸ್ತುಗಳಾಗಿರುತ್ತವೆ ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ಪರ್ಸನ್ನು ಎಂ.ಓ-1, ಆಧಾರಕಾರ್ಡನ್ನು ಎಂ.ಓ-2 ಮತ್ತು ಒಂದು ವಿವೊ ಕಂಪನಿಯ ಮೊಬೈಲನ್ನು ಎಂ.ಓ-3 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಕಡತದಲ್ಲಿರುವ ನಾಲ್ಕು ಫೋಟೋಗಳನ್ನು ತೋರಿಸಲಾಗಿ, ಸಾಕ್ಷಿಯು ಅವುಗಳನ್ನು ನೋಡಿ, ಸದರಿ ಫೋಟೋಗಳಲ್ಲಿರುವ ಮೋಟಾರ್ ಸೈಕಲ್ ಮೇಲೆ ಆರೋಪಿಯು ಆ ದಿನ ಬಂದಿದ್ದ ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ನಾಲ್ಕು ಫೋಟೋಗಳನ್ನು ನಿಪಿ-4 ರಿಂದ ನಿಪಿ-7 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-</u>

1. ನಾನು ಎಂ.ಬಿ.ಎ ಪದವೀಧರಳಾಗಿರುತ್ತೇನೆ. ನನ್ನ ಕನ್ನಡ ಭಾಷೆ ಓದಲು ಮತ್ತು ಬರೆಯಲು

ಬರುತ್ತದೆ. ದೂರನ್ನು ನಾನು ನನ್ನ ಗಂಡನಿಗೆ ಹೇಳಿ ಬರೆಸಿ ಪೋಲಿಸರಿಗೆ ನೀಡಿರುತ್ತೇನೆ. ನನಗೆ ದೂರು ಬರೆಯಲು ಯಾವುದೇ ತೊಂದರೆ ಇರಲಿಲ್ಲ, ನನ್ನ ಗಂಡ ನೀನು ಹೇಳು, ನಾನು ದೂರು ಬರೆಯುತ್ತೇನೆ ಎಂದು ಹೇಳಿದ್ದರಿಂದ ನಾನು ಅವರಿಂದ ದೂರು ಬರೆಸಿರುತ್ತೇನೆ. ಘಟನೆ ದಿನಾಂಕ 21-06-2021 ರಂದು ಆಗಿದ್ದರೂ ದಿನಾಂಕ 26-06-2021 ರಂದು ಏಕೆ ವಿಳಂಬ ಮಾಡಿ ದೂರು ನೀಡಿರುತ್ತೀರಿ? ಎಂದು ವಕೀಲರು ಪ್ರಶ್ನಿಸಿದಾಗ ಮೊದಲು ಫೋನ್ ಮತ್ತು ದುಡ್ಡು ಹೋಗಿರುವುದರಿಂದ ನಾನು ಅದರ ಬಗ್ಗೆ ಚಿಂತಿಸಿರಲಿಲ್ಲ, ಆದರೆ ನಾನು ಕಾಲೇಜಿಗೆ ಹೋದ ನಂತರ ನನ್ನ ಫೋನ್ ನಂಬರನಿಂದ ಅಶ್ಲೀಲ ಮೆಸೇಜ್‌ಗಳು ಬರುತ್ತಿವೆ ಎಂದು ಹೇಳಿದ ಮೇಲೆ ನಾನು ನನ್ನ ಸಿಮಗಳನ್ನು ಬ್ಲಾಕ್ ಮಾಡಿಸಿದ ಮೇಲೆಯೂ ಬೇರೆ ನಂಬರನಿಂದ ಅಶ್ಲೀಲ ಮೆಸೇಜಗಳು ನಮ್ಮ ಕಾಲೇಜಿನ ವಿದ್ಯಾರ್ಥಿನಿಯರಿಗೆ ಬರುತ್ತಿದ್ದರಿಂದ ನಾನು ಪೋಲಿಸರಿಗೆ ದೂರು ನೀಡಿರುತ್ತೇನೆ. ನಾನು ನನ್ನ ಬ್ಯಾಂಕ್ ಖಾತೆಯನ್ನು ಬ್ಲಾಕ್ ಮಾಡಿಸಿರುವ ಬಗ್ಗೆ ದಾಖಲೆಯನ್ನು ಪೋಲಿಸರಿಗೆ ನೀಡಿಲ್ಲ.

2. ಘಟನಾ ಸ್ಥಳ ಮತ್ತು ಪೋಲಿಸ್ ಠಾಣೆಯ ನಡುವಿನ ಅಂತರ ಸುಮಾರು ಅರ್ಧ ಕಿಲೋಮೀಟರನಷ್ಟು ಇದೆ ಎಂದರೆ ಸರಿ. ನಾನು ಕರ್ತವ್ಯ ಮುಗಿಸಿ ಕಾಲೇಜಿನಿಂದ ಒಬ್ಬಳೇ ಮನೆಗೆ ಬರುತ್ತಿದ್ದೆ. ನಾನು ನಡೆದುಕೊಂಡು ಬರುತ್ತಿದ್ದ ರಸ್ತೆ ಅಂದರೆ ದೇಸಾಯಿ ಸರ್ಕಲ ಹಾಗೂ ಮೈಗೂರು ರೋಡ್ ಜನರಿಂದ ಕೂಡಿರುತ್ತದೆ ಎಂದರೆ ಸರಿ. ನನ್ನ ಕೈಯಿಂದ ಪರ್ಸನ್ನು ಕಿತ್ತುಕೊಂಡು ಹೋದ ವ್ಯಕ್ತಿ ಈತನೇ ಎಂದು ಪೋಲಿಸರು ನನಗೆ ತೋರಿಸಿದ ಮೇಲೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಫೋನ್ ಮತ್ತು ಹಣ ಹೋಗಿದ್ದರಿಂದ ನಾನು ಕೂಡಲೇ ಹೋಗಿ ಪೋಲಿಸರಿಗೆ ದೂರು ನೀಡಿರಲಿಲ್ಲ. ಆರೋಪಿಯು ನನ್ನ ಮೊಬೈಲನಿಂದ ಅಶ್ಲೀಲ ಮೆಸೇಜಗಳನ್ನು ಕಳುಹಿಸುತ್ತಿದ್ದರಿಂದ ನಾನು ಪೋಲಿಸರಿಗೆ ದೂರು ನೀಡಿರುತ್ತೇನೆ. ಘಟನೆ ನಡೆದಿದೆ ಎಂದು ಹೇಳುವ ಸಮಯದಲ್ಲಿ ಸ್ಥಳದಲ್ಲಿ ಬೇರೆ ಯಾರೂ ಇರಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪರ್ಸ ಮತ್ತು ಮೊಬೈಲ್ ಕಳೆದಿರುವುದರಿಂದ ಆರೋಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

3. ಪಾಸವರ್ಡ ಅಥವಾ ಪಿನ್ ನಂಬರ್ ಇಲ್ಲದೇ ಫೋನ್ ಪೇ ಮೂಲಕ ಹಣ ವರ್ಗಾಯಿಸಲು ಬರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಡೆಬಿಟ್ ಕಾರ್ಡ ಪರ್ಸನಲ್ಲಿಯೇ ಇತ್ತು, ಅದರಿಂದ ಬೇರೆ ಪಿನ್ ನಂಬರ್ ಹಾಕಿ ಹಣ ಡ್ರಾ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪಿನ್ ನಂಬರ್ ಚೇಂಜ್ ಮಾಡುವ ಬಗ್ಗೆ ಆರೋಪಿಗೆ ಯಾವುದೇ ಮಾಹಿತಿ ಇರದೇ ಇದ್ದರೂ ಆತನ ವಿರುದ್ಧ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಖಾತೆಯಿಂದ ಎಷ್ಟು ಜನರಿಗೆ ಮತ್ತು ಯಾವ

ನಂಬರಿಗೆ ಹಣ ವರ್ಗಾಯಿಸಲಾಗಿದೆ ಎಂದು ನಾನು ನೀಡಿರುವ ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿ. ಯಾರ ಖಾತೆಗೆ ಹಣ ವರ್ಗಾವಣೆಯಾಗಿದೆ ಎಂದು ಸಹ ಬರೆಸಿಲ್ಲ ಎಂದರೆ ಸರಿ. ಆರೋಪಿಯು ನನ್ನ ಮೊಬೈಲನಿಂದ ಯಾರಿಗೆ ಅಶ್ಲೀಲ ಮೆಸೇಜ್ ಮತ್ತು ವಿಡಿಯೋಗಳನ್ನು ಕಳುಹಿಸಿರುತ್ತಾರೆ ಎಂದು ನನ್ನ ದೂರಿನಲ್ಲಿ ಬರೆಸಿಲ್ಲ. ಸಾಕ್ಷಿಯು ಮುಂದುವರೆದು ವಿದ್ಯಾರ್ಥಿನಿಯರಿಗೆ ಕಳುಹಿಸಲಾಗಿರುತ್ತದೆ ಎಂದು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ವಿದ್ಯಾರ್ಥಿನಿಯರಿಗೆ ಅಶ್ಲೀಲ ಮೆಸೇಜ್ ಮತ್ತು ವಿಡಿಯೋಗಳನ್ನು ಕಳುಹಿಸಲಾಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಲಾದ ಫೋಟೋಗಳನ್ನು ನಾನು ಮತ್ತು ಪೋಲಿಸರು ಶಾಮೀಲಾಗಿ ಸೃಷ್ಟಿಸಿದ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲ ಬಾರಿಗೆ ಆರೋಪಿಯನ್ನು ಘಟನಾ ಸ್ಥಳದಲ್ಲಿ ನೋಡಿರುತ್ತೇನೆ. ಪೋಲಿಸರು ಆರೋಪಿಯನ್ನು ಬಂಧಿಸಿ ನನಗೆ ತೋರಿಸಿದಾಗ ಆತನ ಹೆಸರು ನನಗೆ ಗೊತ್ತಾಗಿರುತ್ತದೆ. ದಿನಾಂಕ 30-06-2021 ರಂದು ಪೋಲಿಸರು ನನಗೆ ಆರೋಪಿಯನ್ನು ತೋರಿಸಿರುತ್ತಾರೆ. ಆರೋಪಿಯ ಹೆಸರು ಪೋಲಿಸರಿಂದ ನನಗೆ ಗೊತ್ತಾಗಿರುತ್ತದೆ. ನಾನು ಕಳೆದುಕೊಂಡಿರುವ ಪರ್ಸ್, ಮೊಬೈಲ್ ಮತ್ತು ಆಧಾರಕಾರ್ಡ ಪೋಲಿಸರ ಮೂಲಕ ಪತ್ತೆ ಹಚ್ಚಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ಅಪರಾಧ ಮಾಡದೇ ಇದ್ದರೂ ಪೋಲಿಸರ ಮಾತು ಕೇಳಿ ನಾನು ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೋಟಾರ್ ಸೈಕಲ್ ನನ್ನ ಸಮಕ್ಷಮ ಜಪ್ತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಿನಾಂಕ 30-06-2021 ರಂದು ಪೋಲಿಸರು ಆರೋಪಿ ಮತ್ತು ಆತನ ಮೋಟಾರ್ ಸೈಕಲನ್ನು ನನಗೆ ತೋರಿಸಿದ್ದು, ನಾನು ಆರೋಪಿಯನ್ನು ಮತ್ತು ಮೋಟಾರ್ ಸೈಕಲನ್ನು ಗುರುತಿಸಿರುತ್ತೇನೆ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR

Digitally signed by RAJASHEKHAR
Date: 2025.08.14 10:50:50 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

| | |
|---|---|
| <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.</u> | |
| ಸಿ.ಸಿ.ನಂ.**72/2021** | |
| ಚಾಸಾ-**2** | |
| ಪ್ರಾಸಾ-**2** | |
| ಸಾಕ್ಷಿದಾರರ ಹೆಸರು | ಶರಣಬಸಪ್ಪ ಸಜ್ಜನ್ |
| ತಂದೆಯ ಹೆಸರು | ಪರಪ್ಪ |
| ವಯಸ್ಸು | **39** ವರ್ಷ |
| ಉದ್ಯೋಗ | ಸಹಾಯಕ ಪ್ರಾಧ್ಯಾಪಕರು |
| ವಾಸಸ್ಥಳ | ಜಮಖಂಡಿ |

<u>ದಿನಾಂಕ **13-08-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆ:- ಸ.ಸ.ಅ ರವರಿಂದ:-</u>

1. ದಿನಾಂಕ 27-06-2021 ರಂದು ಪೋಲಿಸರು ನನ್ನನ್ನು ಮತ್ತು ಚಾಸಾ-3 ಸಂಜೀವಕುಮಾರ ಕಾಂಬಳೆ ಇವರನ್ನು ಮೈಗೂರು ರಸ್ತೆಯಲ್ಲಿರುವ ಡಾ: ಜತ್ತಿಯವರ ಮನೆಯ ಮುಂದೆ ಕರೆಯಿಸಿ, ಘಟನಾ ಸ್ಥಳವನ್ನು ನಮಗೆ ತೋರಿಸಿ, ನಮ್ಮ ಸಮಕ್ಷಮ ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ. ಚಾಸಾ-1 ರವರ ಪರ್ಸನ್ನು ಒಬ್ಬ ವ್ಯಕ್ತಿ ಬೈಕ್ ಮೇಲೆ ಬಂದು ಕಸಿದುಕೊಂಡು ಹೋಗಿರುತ್ತಾನೆ ಎಂದು ಪೋಲಿಸರು ನಮಗೆ ತಿಳಿಸಿರುತ್ತಾರೆ. ಬೆಳಿಗ್ಗೆ 10 ಗಂಟೆಯಿಂದ ಬೆಳಿಗ್ಗೆ 11 ಗಂಟೆಯವರೆಗೆ ಪೋಲಿಸರು ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿರುತ್ತಾರೆ. ಸ್ಥಳ ಪಂಚನಾಮೆ ಮಾಡುವ ಸಮಯದಲ್ಲಿ ಚಾಸಾ-1 ಶ್ರೀಮಯಿರವರು ಹಾಜರಿದ್ದರು ಮತ್ತು ಅವರು ಘಟನಾ ಸ್ಥಳವನ್ನು ತೋರಿಸಿ, ಬೈಕ್ ಸವಾರ ಬಂದು ನನ್ನ ಪರ್ಸನ್ನು ಕಸಿದುಕೊಂಡು ಹೋಗಿರುತ್ತಾನೆ ಎಂದು ನಮಗೆ ಹೇಳಿರುತ್ತಾರೆ.

2. ಈಗ ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಸದರಿ ದಾಖಲೆಯನ್ನು ನಿಪಿ-8 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಯು ನಿಪಿ-2 ಮತ್ತು ನಿಪಿ-3 ಫೋಟೋಗಳನ್ನು ನೋಡಿ ಅವುಗಳನ್ನು ಸ್ಥಳ ಪಂಚನಾಮೆ ಮಾಡುವ ಸಮಯದಲ್ಲಿ ತೆಗೆಯಲಾಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಫೋಟೋಗಳನ್ನು ಡಾ: ಜತ್ತಿಯವರ ಮನೆಯ ಮುಂದೆ ಇರುವ ಘಟನಾ ಸ್ಥಳದಲ್ಲಿ ತೆಗೆಯಲಾಗಿರುತ್ತದೆ.

<u>ಪಾಟೀ ಸವಾಲು: ಆರೋಪಿ ಪರ ಶ್ರೀ.ಬಿ ಆರ್ ಡಿ ವಕೀಲರಿಂದ:-</u>

1. ದಿನಾಂಕ 27-06-2021 ರಂದು ಪೋಲಿಸರು ನನ್ನನ್ನು ಪಂಚನಾಮೆಗಾಗಿ ಕರೆಸಿದ್ದರು. ನಾನು ಘಟನಾ ಸ್ಥಳಕ್ಕೆ ಹೋಗುವಷ್ಟರಲ್ಲಿ ಪೋಲಿಸರು ಹಾಜರಿದ್ದರು. ನಾನು ನೀಡಿದ

ಮಾಹಿತಿಯ ಪ್ರಕಾರ ಪೋಲಿಸರು ಪಂಚನಾಮೆ ಬರೆದಿಲ್ಲ. ಸಾಕ್ಷಿಯು ಮುಂದುವರೆದು ಪೋಲಿಸರು ಪಂಚನಾಮೆ ಬರೆದು, ನನಗೆ ಓದಿ ಹೇಳಿದ ನಂತರ ನಾನು ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಪೋಲಿಸರು ಪಂಚನಾಮೆ ಬರೆದಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಹೋದ ಮೇಲೆ ಪೋಲಿಸರು ಪಂಚನಾಮೆ ಬರೆದಿರುತ್ತಾರೆ ಎಂದು ಹೇಳುತ್ತಾರೆ. ಘಟನಾ ಸ್ಥಳದಲ್ಲಿ ಪೋಲಿಸರು ಸ್ಥಳದ ಅಳತೆ ಮಾಡಿಲ್ಲ.

2. ನಾನು ಮತ್ತು ಚಾಸಾ-1 ರವರು ಸಹುದ್ಯೋಗಿಗಳಾಗಿರುತ್ತೇವೆ ಎಂದರೆ ಸರಿ. ನಾನು ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಪಂಚನಾಮೆ ಮಾಡದೇ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಬರೆದಿರುವ ಪಂಚನಾಮೆಗೆ, ನಾನು ಪೋಲಿಸ್ ಠಾಣೆಗೆ ಹೋಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR

Digitally signed by RAJASHEKHAR
Date: 2025.08.14 10:50:57 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.